


ಬೆಳೆದವರು ನಾವು. 'ಪಾರೋತಿ', ರಾಮ ಐತಾಳ, ಸರಸೋತಿಯಂತಹ ಪಾತ್ರಗಳು ನಮ್ಮ ಅಜ್ಜ ಅಜ್ಜಿ, ಅತ್ತೆ ಮಾವ ಮಂತಾದವರೇ ಆಗಿದ್ದಾರೆ ಎಂಬುದನ್ನೆಲ್ಲ ನೆನಪಿಸಿದರೆ ಅಚ್ಚರಿ ಏನಿಲ್ಲ.

ಈ ಕಾದಂಬರಿಯ ಮೊದಲ ಅಧ್ಯಾಯ ಅತ್ಯಂತ ಸಾಂಕೇತಿಕವಾಗಿದ್ದು ಪಾರೋತಿಯ ಮದುವೆಯ ದಿನದ ಸುಯಿಲು ಗಾಳಿಮಳೆ ಅವಳ ಜೀವನದ ಕಷ್ಟ ಪರಂಪರೆಯನ್ನು ಪ್ರತಿನಿಧಿಸುವಂತಿದೆ. ಮದುವೆಯಾದ ಹದಿನೈದು ವರ್ಷಗಳಲ್ಲಿ ಪಾರೋತಿಯ ಜೀವನ ತನ್ನ ಅಮಾಯಕತೆ, ಮುಗ್ಧತೆಯನ್ನು ಕಳೆದುಕೊಂಡು ದೈನಿಕದ, ಬಡತನದ ಚಕ್ರದಲ್ಲಿ ಸಿಲುಕಿಕೊಳ್ಳುತ್ತದೆ. ಪೌರೋಹಿತ್ಯ ಮಾಡುವ ಗಂಡ ರಾಮ ಐತಾಳರ